## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 1445/17** **ಸಿ. ಡಬ್ಲುಃ 02**

**ಪಿ. ಡಬ್ಲುಃ 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಪುಟ್ಟಸ್ವಾಮಿ<br>ಲೇ. ಪುಟ್ಟಮಾದಯ್ಯ<br>53 ವರ್ಷ<br>ಗಾರಕೆಲಸ<br>ಕವಲಂದೆ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 07-04-2026 |

**ಮುಖ್ಯ ವಿಚಾರಣೆಃ  ಮಾನ್ಯ ಎಪಿಪಿ   ವಕೀಲರಿಂದಃ**

ನನಗೆ ಚಾಸಾ-1 ರಿಂದ 6 ರವರ ಪರಿಚಯ ಇರುತ್ತದೆ. ಮೃತ ಪುಟ್ಟಸ್ವಾಮಿ ನಮ್ಮ ಪಕ್ಕದ ಊರಿನವರು  ಇರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಆರೋಪಿ ಯಾವ ರೀತಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಪುಟ್ಟಸ್ವಾಮಿರವರಿಗೆ  ಡಿಕ್ಕಿಪಡಿಸಿದ ಎಂದು ನಾನು ನೋಡಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಪೋಲೀಸರು ನನ್ನನ್ನು ಯಾವುದೇ ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ . ಈ ಪ್ರಕರಣದ ವಿದ್ಯಾಮಾನ ನನಗೆ ಗೊತ್ತಿಲ್ಲ

ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದು ಸ್ಥಳ ಮಹಜರು  ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು  ನಿಪಿ-3 ಎಂದು, ಅದರ ಮೇಲಿರುವ

ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಿಪಿ–3 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ–3 ಕ್ಕೆ ಸುಮಾರು 9 ವರ್ಷಗಳ ಹಿಂದೆ ಪೊಲೀಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**<u>ಪಾಟೀ ಸವಾಲುಃ ಶ್ರೀ. ಎಪಿಪಿ ಯವರಿಂದ</u>**

ದಿಃ 27–04–2017 ರಂದು ನಾನು ಕೆ ಆರ್ ಪುರ ಸರ್ಕಲ್ ಬಳಿ ನಿಂತಿದ್ದಾಗನಂಜನಗೂಡು ಚಾಮರಾಜನಗರ ಮುಖ್ಯ ರಸ್ತೆ ಯಲ್ಲಿ ಒಂದು ಮೋಟಾರು ಸೈಕಲ್ ಅನ್ನು ಅದರ ಸವಾರ ಚಾಸಮರಾಜನಗರ ಕಡೆಯಿಂದ ನಂಜನಗೂಡು ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿದ್ದು ರಸ್ತೆಯ ಎಡಭಾಗದ ಕವಲಂದೆ ಕಡೆಗೆ ಹೋಗುತ್ತಿದ್ದ ಒಬ್ಬ ಪಾದಚಾರಿಗೆ ಡಿಕ್ಕಿ ಪಡಿಸಿದ ಎಂದರೆ ಸರಿಯಲ್ಲ. ಪಾದಚಾರಿ ಕೆಳಕ್ಕೆ ಬಿದ್ದಿದ್ದನ್ನು ನಾನು ಕಣ್ಣಾರೆ ನೋಡಿದೆನು ಎಂದರೆ ಸರಿಯಲ್ಲ. ತಕ್ಷಣ ನಾನು ಹಾಗೂ ಚಾಸಾ–3 ರವರು ಸ್ಥಳಕ್ಕೆ ಹೋಗಿ ನೋಡಲಾಗಿ ಗಾಯಗೊಂಡವರು ಬಸವರಾಜ ಪುರದ ಸಿದ್ದಯ್ಯರವರ ಮಗ ಪುಟ್ಟಸ್ವಾಮಿ ಎಂದು ತಿಳಿಯಿತು ಎಂದರೆ ಸರಿಯಲ್ಲ. ಅವರ ಹಣೆಯ ಎಢಬಾಗ ಎಡ ಕಿವಿ , ಎದೆಗೆ ಎಡ ತೋಳಿಗೆ, ಎಡ ಕಾಲಿನ ಮಂಡಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ವಾಹನ ನಂಬರ್ ನೋಡಲಾಗಿ ಯಮಹಾ ಮೋಟಾರು ಸೈಕಲ್ ಕೆಎ –09– ಹೆಚ್‌ಜಿ–5415 ಆಗಿದ್ದು ಅದರ ಸವಾರ ಚೆನ್ನದ ಗುಡಿ ಹುಂಡಿ ಗ್ರಾಮದ ಸ್ವಾಮಿರವರ ಮಗ ಶಿವಕುಮಾರ್ ಎಂದು ತಿಳಿಯಿತು ಎಂದರೆ ಸರಿಯಲ್ಲ.

ದಿಃ 14–05–2017 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಮರು ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ

____________________ ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಮೇಲೆ ಓದಿ ಹೇಳಲಾದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ .

ಸಾಕ್ಷಿಗೆ ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ಸದರಿ ಹೇಳಿಕೆ ಭಾಗವನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಯಿಯಿಂದ ಗುರುತಿಸಲಾದ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

ದಿಃ 30-04-2017 ರಂದು ಪೂಲೀಸರು ಅಪಘಾತ ನಡೆದ ಸ್ಥಳಕ್ಕೆ ಬಂದಾಗ ಕೃತ್ಯ ನಡೆದ ಸ್ಥಳವನ್ನು ನಾನೇ ತೋರಿಸಿದ ಮೇರೆಗೆ ನನ್ನನ್ನು ಚಾಸಾ-3 ಮತ್ತು 9 ರವರನ್ನು ಬರಮಾಡಿಕೊಂಡು ಪಂಚರಾಗುವಂತೆ ಕೋಡಿಕೊಂಡರು ಎಂದರೆ ಸರಿಯಲ್ಲ.

ಘಟನಾ ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ. ಮಧ್ಯಾಹ್ನ 4-00 ರಿಂದ 04-45 ವರೆಗೆ ನಿಪಿ-3 ರಂತೆ ನನ್ನ ಮತ್ತು ಚಾಸಾ-3 ಮತ್ತು 9 ರವರ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**